ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ,ಬಳ್ಳಾರಿ.
ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್ ಬಳ್ಳಾರಿ
08392-242700, 08392-24007
ಕುಲಸಚಿವರು

ಸಂಖ್ಯೆ:ವಿಶ್ರೀಕೃವಿಬ/ಸಕಾವಿ/ಜಿಟಿಟಿಸಿಯೊ/2025–26/

ದಿನಾಂಕ: 18.06.2025

# ಅಧಿಸೂಚನೆ

ವಿಷಯ: ಸಂಶೋಧನಾ ಸಹಾಯಕ ಮತ್ತು ಕ್ಷೇತ್ರ ತನಿಖಾಧಿಕಾರಿ ತಾತ್ಕಾಲಿಕ ಹುದ್ದೆಗಳ ನೇಮಕಾತಿ ಅರ್ಜಿ ಅಹ್ವಾನಿಸುವ ಕುರಿತು.

ಉಲ್ಲೇಖ: 1. ಪ್ರಾಂಶುಪಾಲರು/ಸ.ಉ.ತ.ಕೇ. ಹೊಸಪೇಟೆ ಇವರ ಪತ್ರದ ದಿನಾಂಕ: 23.01.2025
2. ವಿಶ್ರೀಕೃವಿಬ/ಆಡಳಿತ–ಸಾಮಾನ್ಯ/ಪ್ರೋಜೇಕ್ಟ್/2025–26/402, ದಿನಾಂಕ: 13.06.2025
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 12.06.2025

****

ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಗಣಿ ಬಾಧಿತ ಪ್ರದೇಶಗಳಲ್ಲಿ ಕೌಶಲ್ಯ ಪಾರ್ಕ ಸ್ಥಾಪನೆಯ ವಿಷಯವಾಗಿ, ಬಳ್ಳಾರಿಯಲ್ಲಿ ಕೌಶಲ್ಯ ಪಾರ್ಕ ಸ್ಥಾಪಿಸುವ ಸಲುವಾಗಿ ಯೋಜನಾ ಸಮಿಕ್ಷೆ ವರದಿಯ ತಯಾರಿಕೆಗೆ ಸಂಶೋಧನಾ ಸಹಾಯಕ ಮತ್ತು ಕ್ಷೇತ್ರ ತನಿಖಾಧಿಕಾರಿ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ನೇಮಕಾತಿಯು ತಾತ್ಕಾಲಿಕವಾಗಿದ್ದು, 02 ತಿಂಗಳ ಅವಧಿಗೆ ಸೀಮಿತವಾಗಿದೆ. ಅಭ್ಯರ್ಥಿಗಳು ಎಂ.ಎಸ್.ಡಬ್ಲ್ಯೂ ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ ಹಾಗೂ ಮಹಿಳಾ ಅಧ್ಯಯನ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದವರಾಗಿರಬೇಕು. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ತಮ್ಮ ವೈಯಕ್ತಿಕ ವಿವರಗಳೊಂದಿಗೆ ದಿನಾಂಕ: 25.06.2025 ರ ಒಳಗಾಗಿ ಡಾ. ಗೌರಿ ಮಾಣಿಕ್ ಮಾನಸ, ಯೊಜನಾ ನೀರ್ದೆಶಕರು ಹಾಗೂ ಪ್ರಾಧ್ಯಾಪಕರು, ಸಮಾಜ ಕಾರ್ಯ ಅಧ್ಯಯನ ವಿಭಾಗ, ವಿ.ಶ್ರೀ.ಕೃ. ವಿಶ್ವವಿದ್ಯಾಲಯ, ಬಳ್ಳಾರಿ – 583 105 ಇವರಿಗೆ ಸಲ್ಲಿಸತಕ್ಕದ್ದು.

ಸದರಿ ಹುದ್ದೆಗಳ ಆಯ್ಕೆಗೆ ಸಂಬಂಧಿಸಿದಂತೆ ದಿನಾಂಕ: 03.07.2025 ರಂದು ಬೆಳ್ಳಿಗ್ಗೆ 11.00 ಘಂಟೆಗೆ ವಿಶ್ವವಿದ್ಯಾಲಯದ ಆವರಣದಲ್ಲಿ ಸಂದರ್ಶನ ಆಯೋಜಿಸಲಾಗಿದ್ದು, ಎಲ್ಲಾ ಅಗತ್ಯ ಅರ್ಹ ದಾಖಲಾತಿಗಳೊಂದಿಗೆ ಅಭ್ಯರ್ಥಿಗಳು ಹಾಜರಾಗತಕ್ಕದ್ದು.

| ಕ್ರ.ಸ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಶೈಕ್ಷಣಿಕ ಅರ್ಹತೆ | ಸಂಭಾವನೆ | ಅವಧಿ |
|---|---|---|---|---|---|
| 01 | ಸಂಶೋಧನಾ ಸಹಾಯಕರು (ತಾತ್ಕಾಲಿಕ) | 01 | ಸಮಾಜ ವಿಜ್ಞಾನ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇಕಡಾ 55% ರಷ್ಟು ಅಂಕಗಳು ಹಾಗೂ ಎಂ.ಫಿಲ್/ಪಿ.ಹೆಚ್.ಡಿ ಹೊಂದಿರತಕ್ಕದ್ದು | 25,000/– | 02 ತಿಂಗಳು |
| 02 | ಕ್ಷೇತ್ರ ತನಿಖಾಧಿಕಾರಿ (ತಾತ್ಕಲಿಕ) | 05 | ಸಮಾಜ ವಿಜ್ಞಾನ ವಿಷಯಗಳಲ್ಲಿ ಶೇಕಡಾ 55% ರಷ್ಟು ಅಂಕಗಳೊಂದಿಗೆ ಸ್ನಾತಕೋತ್ತರ ಪದವಿ ಹೊಂದಿರತಕ್ಕದ್ದು | 15,000/– | 02 ತಿಂಗಳು |

ಟಿಪ್ಪಣಿ:

1. ಅಪೂರ್ಣ ಅರ್ಜಿಗಳನ್ನು ಹಾಗೂ ಅಗತ್ಯ ಶೈಕ್ಷಣಿಕ ದಾಖಲಾತಿಗಳನ್ನು ಹೊಂದಿರದ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
2. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ದಿನ ಭತ್ಯೆ/ಪ್ರವಾಸ ಭತ್ಯೆ ನೀಡಲಾಗುವುದಿಲ್ಲ.
3. ನೇಮಕಾತಿಗೆ ಸಂಬಂಧಿಸಿದಂತೆ ಯಾವುದೇ ತೆರನಾದ ಶಿಫಾರಸ್ಸು, ಹಾಗೂ ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ. ಹಾಗೂ ಅವುಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ.
4. ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ.
5. ಸಂದರ್ಶನಕ್ಕೆ ಸಂಬಂಧಿಸಿದಂತೆ ಯಾವುದೇ ಮಿಂಚಂಚೆ ಕಳುಹಿಸಲಾಗುವುದಿಲ್ಲ.

18/6/25

ಕುಲಸಚಿವರು
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ